ಇ) ೧೯೮೯-೯೦ರ ರಾಜ್ಯದ ಆಯವ್ಯಯದಲ್ಲಿ ಕ್ರೀಡಾಂಗಣ ನಿರ್ಮಾಣಕ್ಕಾಗಿ ಹಣ ಕಾಯ್ದಿರಿಸಾಲಿಗಿದೆಯೆಂ ?

ಶ್ರೀ ಆರ್. ವಿ. ದೇಶಪಾಂಡೆ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

ಅ) ಉಡುಪಿ ಪುರಸಭೆಯು ತನ್ನ ನಿರ್ಣಯ ೧೫೬ ದಿನಾಂಕ ೨೯-೯-೮೮ರಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳನ್ನು ಅಜ್ಜರಕೆಡದಲ್ಲಿ ಕ್ರೀಡಾಂಗಣ ನಿರ್ಮಿಸಲು ಆರ್ಥಿಕ ಸಹಾಯ ಕೋರಲು ತೀರ್ಮಾನ ಮಾಡಿರುತ್ತೆ. ಪುರ ಸಭೆಯು ಇನ್ನು ಪ್ರಸ್ತಾವನೆ ಸಲ್ಲಿಸಿಲ್ಲ.

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ತಾರಾಮಂಡಲ ವೀಕ್ಷಣಾಲಯದ ನಿರ್ಮಾಣದ ಬಗ್ಗೆ

೧೮೩. ಶ್ರೀ ಪಿ. ಸಿ. ವಿಂಸಿಸ್ವಾಮಯ್ಯ (ದೇವನಹಳ್ಳಿ).— ಮಾನ್ಯ ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರಿನಲ್ಲಿ ತಾರಾಮಂಡಲದ ವೀಕ್ಷಣಾಲಯದ ಕೆಲಸವು ಯಾವಾಗ ಪ್ರಾರಂಭವಾಯಿತರ

ಆ) ಈವರೆವಿಗೂ ಒಟ್ಟು ಖರ್ಚಾದ ಹಣವೆಷ್ಟು ?

ಇ) ಈ ಕಟ್ಟಡವನ್ನು ಸಾರ್ವಜನಿಕರಿಗಾಗಿ ಯಾವಾಗ ಉದ್ಘಾಟನೆ ಮಾಡಲಾಗುವುದು ?

ಶ್ರೀ ಆರ್. ವಿ. ದೇಶಪಾಂಡೆ, (ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಮಾರ್ಚ್ ೧೯೮೫

ಆ) ರೂ. ೨,೩೮,೩೨,೦೦೦-೦೦

ಇ) ಸಧ್ಯದಲ್ಲಿಯೇ.

ಕುಡಿಯುವ ನೀರು ಸರಬರಾಜು ಯೋಜನೆಗಳು

೭೨. ಶ್ರೀ ವೆಂಕಟರಾಮಯ್ಯ. (ಮಂಳಬಾಗಿಲು).—ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿರುವ ಒಟ್ಟು ಕುಡಿಯುವ ನೀರು ಸರಬರಾಜು ಯೋಜನೆಗಳ (ಕೊಳವೆ ಬಾವಿಗಳು, ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು, ತ್ವರಿತ ಗ್ರಾಮೀಣ ನೀರು ಸರಬರಾಜು, ಕಿರು ನೀರು ಸರಬರಾಜು ಇತ್ಯಾದಿಗಳು) ಸಂಖ್ಯೆ ಎಷ್ಟು ?

ಆ) ಸರ್ಕಾರದ ಮುಂದಿರುವ ಬಾಕಿ ಪ್ರಕರಣಗಳೆಷ್ಟು ?

ಇ) ಈ ಯೋಜನೆಗಳು ಯಾವಾಗ ಪೂರ್ಣಗೊಳ್ಳುತ್ತವೆ ?

ಶ್ರೀ ಎಂ. ಪಿ. ಪ್ರಕಾಶ್ (ಗ್ರಾಮೀಣಾಭಿವೃದ್ಧಿ, ಪಂಚಾಯತ್ ರಾಜ್ ಮತ್ತು ವಕ್ಫ್ ಮಂತ್ರಿಗಳು).—

ಅ)	ಕೊಳವೆ ಬಾವಿ	ಕಿ.ನೀ.ಸ.	ರಾ.ಗ್ರಾ. ನೀ.ಸ.	ತ್ವ.ಗ್ರಾ. ನೀ.ಸ.
	೧೦೬೫೫೧	೨೨೫೭	೭೬೯೦	೮೭೩

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.